**SC No. 264/2019**
**P.W. 11**

<u>ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ,</u>
<u>ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು</u>

**SC No. 264/2019 P.W. 11**

(ಸಾಕ್ಷಿದಾರರನ್ನು ಈ ದಿನ ಅಂದರೆ ದಿನಾಂಕ **20.07.2026.** ರಂದು ಪುನಃ ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು)

<u>ಪಾಟೀ ಸವಾಲುಃ ಆರೋಪಿತರ ಪರ ಶ್ರೀ. **AR** ವಕೀಲರಿಂದ</u> :

1. ದೂರನ್ನು ಕೃತ್ಯ ನಡೆದ ಸ್ಥಳದಲ್ಲಿ ಸಂಜೆ 5.00 ಗಂಟೆಗೆ ಪಡೆದುಕೊಂಡೆ. ಠಾಣೆಗೆ ಬಂದು ದೂರು ನೀಡಿಲ್ಲ. ಆ ಸಿಗರೇಟ್ ಯಾವ ಕಂಪನಿಯದ್ದು ಎಂದು ಗೊತ್ತಾಗುತ್ತಿರಲಿಲ್ಲ. ನಾನು ಸ್ಥಳಕ್ಕೆ ಹೋದ ನಂತರ ನೋಟೀಸ್ ನೀಡಿದ್ದೇನೆ. ಕೃತ್ಯ ನಡೆದ ಸ್ಥಳದಿಂದಲೇ ಪಂಚರನ್ನು ಕರೆದುಕೊಂಡೆ. ಟೈಪ್ ಮಾಡಿಸಿ ನೋಟೀಸ್ ಅನ್ನು ನೀಡಿದ್ದೇನೆ. ದೂರಿನಲ್ಲಿ ಇಂತಹ ವ್ಯಕ್ತಿ ಮತ್ತು ಚಹರೆ ಎಂದು ಮಾಹಿತಿ ನೀಡಿಲ್ಲ. ಸ್ಥಳದಲ್ಲಿ ಚಿನ್ನದ ಸರ ಸಿಕ್ಕಿಲ್ಲ ಉಳಿದದ್ದು ಪಿರ್ಯಾದಿಯ ಬಳಿ ಇತ್ತು. ಪಿರ್ಯಾದಿ ಬಳಿ ಇದ್ದ ಸರದ ತೂಕ ಮಾಡಿಸಿಲ್ಲ. ಸದರಿ ಸರವನ್ನು ಮಹಜರ್ ಮೂಲಕ ಜಪ್ತಿ ಮಾಡಿಲ್ಲ. ಆ ಚೈನ್ ನ ಫೋಟೋ ತೆಗೆದುಕೊಂಡಿಲ್ಲ. ನಾವು ಆರೋಪಿ ಪತ್ತೆಗೆ ನೇಮಿಸಿದ್ದ ಸಿಬ್ಬಂದಿಗೆ ಆರೋಪಿ ಚಹರೆ ಬಗ್ಗೆ ತಿಳಿಸಿದ್ದೆ.

2. ಸ್ಥಳದಲ್ಲಿ ಆರೋಪಿಯ ಚಹರೆ ಬಗ್ಗೆ ತಮ್ಮ ಹೇಳಿಕೆಯಲ್ಲಿ ಸಾಕ್ಷಿಗಳು ಹೇಳಿದ್ದಾರೆ. ಆರೋಪಿಯನ್ನು ಪತ್ತೆ ಮಾಡುವ ಬಗ್ಗೆ ಚಹರೆಯ ಮಾಹಿತಿಯನ್ನು ನೀಡಿರಲಿಲ್ಲ. 7 ಜನ ಸಾಕ್ಷಿದಾರರು ಹೇಳಿಕೆಗಳನ್ನು ಆ ದಿನ ಮಾಡಿಕೊಂಡಿದ್ದೆ. ಆ ಪೈಕಿ ಕೆಲವರ ಹೇಳಿಕೆಗಳನ್ನು ಸ್ಥಳದಲ್ಲಿ ಮಾಡಿರುತ್ತೇನೆ. ಉಳಿದ ಸಾಕ್ಷಿದಾರರಿಗೆ ನೋಟೀಸ್ ಕೊಟ್ಟು ಠಾಣೆಗೆ ಕರೆಸಿರಲಿಲ್ಲ. ರೇಜರ್ ಗಳು ಮಾರುಕಟ್ಟೆಯಲ್ಲ ಸಿಗುತ್ತವೆ. ನಾನು ಮು.ಮಾ. 1 ಅನ್ನು ವಶಕ್ಕೆ ಪಡೆದಾಗ ಬೆಳಗ್ಗೆ 8.30 ರಿಂದ 10.30 ಆಗಿತ್ತು. ನಮ್ಮ ಠಾಣೆಯಿಂದ ಸ್ಥಳಕ್ಕೆ 10 ನಿಮಿಷಕ್ಕೆ ಬಂದೆ. ನಾನು ಸ್ಥಳಕ್ಕೆ ಹೋದಾಗ 8.30 ರಿಂದ 10.30 ಆಗಿತ್ತು. ನಾನು ಮಹಜರ್ ಮಾಡಿ ಠಾಣೆಗೆ ವಾಪಸ್ಸು ಹೋಗಿದ್ದು ಸಮಯ ನೆನಪಿಲ್ಲ.

**SC No. 264/2019**
**P.W. 11**

3. ಆ ನಂತರ ಮತ್ತೊಂದು ಮಹಜರ್ ಮಾಡಲು ಬೇರೆ ಸ್ಥಳಕ್ಕೆ ಹೋದೆ. ಅಲ್ಲಿಂದ 15 ನಿಮಿಷಕ್ಕೆ ಮತ್ತೊಂದು ಸ್ಥಳಕ್ಕೆ ಹೋದೆ. ಅಂದರೆ ಬೆಳಗ್ಗೆ 10.45 ರಿಂದ 11.00 ಗಂಟೆಯಾಗಿತ್ತು. ನಾನು ಮಹಜರ್ ಗಳನ್ನು ಠಾಣೆಯಲ್ಲಿ ಸೃಷ್ಟಿ ಮಾಡಿರುತ್ತೇನೆ ಎಂದರೆ ಸರಿ ಅಲ್ಲ. ಆ ಮಹಜರ್ ಬೆಳಗ್ಗೆ 8.30 ರಿಂದ 10.00 ಗಂಟೆ ಎಂದು ತಪ್ಪಾಗಿ ನಮೂದು ಆಗಿದೆ. ನಿಶಾನೆ.ಪಿ. 6 ಅನ್ನು ಠಾಣೆಯಲ್ಲಿ ಸೃಷ್ಟಿ ಮಾಡಿರುತ್ತೇನೆ ಎಂದರೆ ಸರಿ ಅಲ್ಲ. ಜಪ್ತಿ ಮಾಡಿದ ವಸ್ತುಗಳ ಮೇಲೆ ಗಾಯಾಳುವಿನ ಸಹಿಗಳನ್ನು ಪಡೆದುಕೊಂಡಿಲ್ಲ ಕಾರಣ ಅವರು ಒಳರೋಗಿಯಾಗಿ ದಾಖಲಾಗಿದ್ದರು. ಅವರು ಬಿಡುಗಡೆಯಾದ ನಂತರ ಆ ವಸ್ತುಗಳನ್ನು ಅವರಿಗೆ ತೋರಿಸಿಲ್ಲ ಹಾಗೂ ಸಹಿ ಪಡೆದುಕೊಂಡಿಲ್ಲ. ಪಿರ್ಯಾದಿಗೆ ಆರೋಪಿಯನ್ನು ನಾನೇ ತೋರಿಸಿದ್ದು ಎಂದರೆ ಸರಿ ಅಲ್ಲ. ಈ ಗಲಾಟೆಯನ್ನು ಆರೋಪಿ ಮಾಡಿಲ್ಲ ಹಾಗೂ ಸುಳ್ಳು ಅಂತಿಮ ವರದಿ ಸಲ್ಲಿಸಿದ್ದೇನೆ ಎಂದರೆ ಸರಿ ಅಲ್ಲ. ದಾಖಲೆಗಳನ್ನು ಹಾಗೂ ಸಾಕ್ಷಿದಾರರ ಹೇಳಿಕೆಗಳನ್ನು ನಾನೇ ಸೃಷ್ಟಿಸಿದ್ದೇನೆ ಎಂದರೆ ಸರಿ ಅಲ್ಲ.

<u>ಮರು ವಿಚಾರಣೆಃ ಇಲ್ಲ.</u>

(ಈ ಸಾಕ್ಷಿದಾರರನ್ನು ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ವಿಚಾರಣೆ ಮಾಡಿದ್ದು ಅದನ್ನು ಯಥಾವತ್ತಾಗಿ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ ಇದೆ,

**(ಶ್ರೀಮತಿ. ಬಿ.ಎಸ್.ರೇಖಾ )**
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.